ಗೂಡನ್ನು ಯಾವುದೋ ಪ್ರಾಣಿ ಕೆಣಕಿತು ಎಂದಾದರೆ ಸ್ವರಕ್ಷಣೆಯ ವರ್ತನೆ ಏಕಾಏಕಿ ಜಾಗೃತವಾಗಿ ಸುತ್ತಮುತ್ತ ಇರಬಹುದಾದ ಎಲ್ಲರಿಗೂ ಕುಟುಕಿಬಿಡುತ್ತವೆ. ಈ ಗುಟ್ಟನ್ನು ಸೋಲಿಗರು ಕರಗತ ಮಾಡಿಕೊಂಡಿದ್ದಾರೆ. ಜೇನನ್ನು ಸಮೀಪಿಸುವಾಗ ಹೊಗೆಯೊಡನೆ ಸಮೀಪಿಸಬೇಕೆಂಬ ನಿಸರ್ಗ ಸಹಜ ಜ್ಞಾನ ಅವರಿಗೆ ಅನುಭವದಿಂದ ಬಂದಿದೆ.

ನಮ್ಮ ಸೋಲಿಗರು ಜೇನನ್ನು ಹೇಗೆ ಇಳಿಸುತ್ತಾರೆ ಎಂಬುದನ್ನು ವಿಡಿಯೊ ಮಾಡಿದ್ದಾಯಿತು. ಸೂಡು ಕಟ್ಟುವುದು ಮತ್ತು ಮರ ಹತ್ತುವುದು ಅತ್ಯಂತ ಮುಖ್ಯವಾದ ಕೌಶಲಗಳು; ಹೊಗೆಯೇ ರಕ್ಷಾಕವಚ. ಯಾವ ಗೂಡಿನಲ್ಲಿ ಎಷ್ಟು ಜೇನಿದೆ, ವರ್ಷದ ಯಾವ ತಿಂಗಳಲ್ಲಿ ಇಳಿಸಬೇಕು, ಇತ್ಯಾದಿ ವಿಷಯಗಳೂ ಸೋಲಿಗರ ಅನುಭವ ಜ್ಞಾನ. ಫೆಬ್ರುವರಿ ತಿಂಗಳಲ್ಲಿ ನನ್ನ ತೋಟದ ಜೇನುಗೂಡು ನೋಡಿದವನೆ ಆದಷ್ಟು ಬೇಗ ಜೇನು ಇಳಿಸಬೇಕೆಂಬ ತರಾತುರಿಯಲ್ಲಿದ್ದೆ. ಆದರೆ ರಾಮೇಗೌಡ, ‘ಈಗಲೇ ಬೇಡ ಸಾ, ಒಂದೆರಡು ಮಳೆಯಾಗಲಿ, ಉಗಾದಿ ಕಳೆದು ಅಳಿಸಬೇಕು, ಈಗ ಅಳಿದರೆ ತುಪ್ಪ ಸಿಕ್ಕದಿಲ್ಲ’ ಎಂದ. ಉಗಾದಿ ಕಳೆದು ವಾರವಾಯಿತು ಈಗ ಇಳಿಸೋಣವೆ ಎಂದು ಕೇಳಿದರೆ, ‘ಇನ್ನೂ ಹದಿನೈದು ದಿನ ತಡಿರಿ’ ಎಂದ. ಕಾಡಿನ ಗಿಡಮರಗಳೆಲ್ಲ ಹೂವಿನಿಂದ ನಳನಳಿಸುವುದಕ್ಕೂ ಗೂಡು ಜೇನುತುಪ್ಪದಿಂದ ಭರ್ತಿಯಾಗುವುದಕ್ಕೂ ಸಂಬಂಧವಿದೆ. ಇದನ್ನು ಸೋಲಿಗರು ಸಹಜವಾಗಿ ಅರಿಯಬಲ್ಲರು. ಜೇನು ಇಳಿಸುವ ಸಮಯ ಬಂತೆಂದರೆ ಚೆನ್ನಾಗಿ ಮರ ಹತ್ತಬಲ್ಲ ಸೋಲಿಗರಾರೂ ಕೆಲಸಕ್ಕೆ ಬರುವುದಿಲ್ಲ, ಜೇನು ಇಳಿಸಲು ಕಾಡಿಗೆ ಹೋಗಿರುತ್ತಾರೆ. ಪ್ರತಿವರ್ಷ ಆರರಿಂದ ಹತ್ತು ಸಾವಿರ ಕೆ.ಜಿ. ಜೇನುತುಪ್ಪ ನಮ್ಮ ಬಿಳಿಗಿರಿರಂಗನ ಬೆಟ್ಟದ ಕಾಡಿನಿಂದಲೇ ಸಂಗ್ರಹವಾಗುತ್ತದೆ. ಇದನ್ನು ಬೆಟ್ಟದ ಲ್ಯಾಂಪ್ ಸೊಸೈಟಿ ಕೊಂಡು ದಾಸ್ತಾನು ಇಡುತ್ತದೆ. ಮಳೆಗೂ ಜೇನು ಉತ್ಪತ್ತಿಗೂ ಸಂಬಂಧವಿದೆ. ನಿರೀಕ್ಷೆಯಷ್ಟು ಮಳೆ ಬರದೆ ಇದ್ದರೆ ಜೇನು ಕಡಿಮೆ. ಸಕಾಲಕ್ಕೆ ಒಳ್ಳೆ ಮಳೆಯಾದರೆ ಜೇನು ಯಥೇಚ್ಛ. ಈ ನಿಸರ್ಗ ಸಹಜ ಜ್ಞಾನವೇ ಸೋಲಿಗರ ಸ್ವತ್ತು! ‘ಜೇನು ಅಳಿದವನು ಕೈ ನೆಕ್ಕದೆ ಇರ್ತಾನ’ ಅನ್ನುವ ಗಾದೆ ಸತ್ಯಸ್ಯಸತ್ಯ! ಹುಡುಗರಂತೂ ಎಡೆಬಿಡದೆ ಕೈನೆಕ್ಕಲು ಆರಂಭಿಸಿದರು. ‘ಸಾಕು, ಕೈತೊಳ್‌ಕೊಂಡು ನೆಲ ವರಸ್ರೋ’ ಅಂದ್ರೆ ಯಾರೂ ಮಾತು ಕೇಳ್ತಾ ಇಲ್ಲ. ಎಲ್ಲಾ ಮುಗಿದಮೇಲೆ ಜಡೆಯಪ್ಪನ ಜೊತೆ ಹರಟೆ ಆರಂಭವಾಯಿತು. ಮುಂದಿನ ವರ್ಷವೂ ಇದೇ ಕೊಂಬೆಯಲ್ಲಿ ಜೇನು ಗೂಡು ಕಟ್ಟುತ್ತದೆ ಎಂದ ಜಡೆಯಪ್ಪ. ಜೇನುಹುಟ್ಟುಗಳನ್ನು ಕತ್ತರಿಸುವಾಗ ಮರದ ಕೊಂಬೆಗೆ ಅಂಟಿಕೊಂಡಿರುವ ಭಾಗವನ್ನು ಅರ್ಧ ಇಂಚು ಬಿಟ್ಟು ಉಳಿದದ್ದನ್ನು ಕತ್ತರಿಸುತ್ತಾರಂತೆ. ಹೀಗೆ ಬಿಡುವ ಉದ್ದೇಶವೇನೆಂದರೆ ಜೇನುಹುಳುಗಳು ಹಳೆಯ ಕುರುಹನ್ನು ಗುರುತುಹಿಡಿದು, ಈ ಅಡಿಪಾಯವನ್ನೇ ಬಳಸಿ ಸುಲಭವಾಗಿ ಗೂಡು ನಿರ್ಮಿಸುತ್ತವಂತೆ.

ಜೇನುತುಪ್ಪ ಪ್ರಕೃತಿ ನಮಗೆ ನೀಡಿರುವ ಅನರ್ಘ್ಯ ಕೊಡುಗೆ. ಕೆಲವೊಂದು ಹೆಜ್ಜೇನುಗೂಡಿನಲ್ಲಿ 25ರಿಂದ 30 ಕೆ.ಜಿ. ವರೆಗೆ ತುಪ್ಪ ಸಿಗುತ್ತದೆ! ಇಷ್ಟು ಭಾರವನ್ನು ಹೊತ್ತ ಗೂಡು ಕೊಂಬೆಯಿಂದ ಕಿತ್ತು ಬೀಳದೆ ಹೇಗೆ ಅಂಟಿಕೊಂಡಿರುತ್ತದೆ? ಇದೊಂದು ನಿಸರ್ಗದ ಸೋಜಿಗ. ಮರದ ಕೊಂಬೆಗಳ ಮೇಲೆ ತೂಗುವ ಒಂದು ಹೆಜ್ಜೇನಿನ ಗೂಡಿನಲ್ಲಿ ಒಂದು ಲಕ್ಷ ಜೇನುಹುಳುಗಳು ಇರಬಹುದು. ಅರ್ಧ ಕೆ.ಜಿ ಜೇನುತುಪ್ಪ ಸಂಗ್ರಹಿಸಲು ಐವತ್ತು ಸಾವಿರ ಜೇನುಹುಳುಗಳು ಗೂಡಿಗೂ ಹೂವಿಗೂ ಹಾರಾಡುವ ದೂರ ಒಟ್ಟು ಎಂಬತ್ತು ಸಾವಿರ ಕಿಲೋಮೀಟರ್ ಆದೀತು! ಕಾಡಿನ ಹೂಗಳಿಂದ ಸಂಗ್ರಹಿಸುವ ತುಪ್ಪದಲ್ಲಿ ಹೂವಿನ ಪರಾಗವೂ ಬೆರೆತಿರುತ್ತದೆ. ಇದನ್ನು ಸೋಲಿಗರು ‘ಹಿಟ್ಟು’ ಎನ್ನುತ್ತಾರೆ. ಪರಾಗದ ಜೊತೆ ಜೇನುಹುಳುಗಳು ವಿವಿಧ ಜಾತಿಯ ಹೂವಿನ ಮೊಗ್ಗುಗಳಿಂದ ‘ಪ್ರೊಪೋಲಿಸ್’ ಎಂಬ ಅಂಟು ವಸ್ತುವನ್ನೂ ಸಂಗ್ರಹಿಸಿ ಗೂಡಿಗೆ ತರುತ್ತವೆ. ಪ್ರೊಪೋಲಿಸ್ ಅನ್ನು ಗೂಡಿನ ತೂತುಬಿದ್ದ ಭಾಗಗಳನ್ನು ಸರಿಪಡಿಸಲು ಬಳಸುತ್ತವೆ. ಗೂಡು ಮರದ ಕೊಂಬೆಗೆ ಅಥವಾ